**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884/2014**

**ಪಿ.ಡಬ್ಲ್ಯೂಃ 14**

**ಸಿ.ಡಬ್ಲ್ಯೂಃ 12**

**ಹೆಸರು** ಃ ಶ್ರೀಮತಿ ಬಿ ವಿ ಮಾಲತಿ

ಗಂಡನ ಹೆಸರು ಃ ಓಂಕಾರಸ್ವಾಮಿ

**ವಯಸ್ಸು** ಃ **48 ವರ್ಷ**

**ಉದ್ಯೋಗ** ಃ ಗೃಹಿಣಿ

**ವಾಸಸ್ಥಳ** ಃ ತರೀಕೆರೆ

**ದಿನಾಂಕಃ 19-10-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

**2012** ನೇ ಇಸವಿಯಲ್ಲಿ ನಮಗೆ ತುರ್ತಾಗಿ ಹಣ ಬೇಕಾಗಿದ್ದು, ಆಗ ಬಾವಿಕೆರೆಯ ಕೊಡಗು ಗ್ರಾಮೀಣ ಬ್ಯಾಂಕಿಗೆ ನಮ್ಮಲ್ಲಿರುವ ಬಂಗಾರದ ಒಡವೆಗಳನ್ನು ಒತ್ತೆ ಇಟ್ಟು **54,000-00** ಗಳನ್ನು ಸಾಲವಾಗಿ ಪಡೆದಿದ್ದೆವು. ಆ ಕಾಲಕ್ಕೆ ರವಿನಾರಾಯಣ್ ರವರು ಸದರಿ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದರು. ನಾವು ಪಡೆದ ಸಾಲವನ್ನು ಮರುಪಾವತಿ ಮಾಡಿ ನಾವು ಒತ್ತೆ ಇಟ್ಟಿದ್ದ ಒಡವೆಗಳನ್ನು **3-4** ತಿಂಗಳಲ್ಲಿ ಬಿಡಿಸಿಕೊಂಡೆವು. ನನಗೆ ಉಳಿದಂತೆ ಏನು ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸ.ಸ.ಅ. ರವರಿಂದಃ**

ಜೂನ್ **2013** ರಲ್ಲಿ ನಾನು ಮನೆಯಲ್ಲಿರುವಾಗ ಬ್ಯಾಂಕಿನ ಮ್ಯಾನೇಜರ್ ಆದಂತಹ ರವಿನಾರಾಯಣ್ ರವರು ಸುಮಾರು **15** ಲಕ್ಷ ರೂ.ಗಳನ್ನು ದುರುಪಯೋಗಡಿಸಿಕೊಂಡಿದ್ದು, ಅವರ ಮೇಲೆ ಪ್ರಕರಣ ದಾಖಲಾಗಿದೆ ಎನ್ನುವ ವಿಚಾರ ನನಗೆ ತಿಳಿಯಿತು ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿ. ಆರೋಪಿಯು ಬ್ಯಾಂಕಿನಲ್ಲಿರುವ ದಾಖಲೆಗಳನ್ನು ಫೋರ್ಜರಿ ಮಾಡಿ ಅಪ್ರೈಸರ್ ರವರ ಸಹಿಗಳನ್ನು ಫೋರ್ಜರಿ ಮಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನನಗೆ ತಿಳಿದು ಬಂತು ಎಂದು ಹೇಳಿಕೆ ನೀಡಿರುತ್ತೇನೆಂದರೆ ನನಗೆ ಗೊತ್ತಿಲ್ಲ. ದಿಃ **03-07-2012** ರಂದು ನನ್ನ ಸಹಿ ಫೋರ್ಜರಿ ಮಾಡಿ ಹಾಗೂ ಅಪ್ರೈಸರ್

ರಾಘವೇಂದ್ರ ಇವರ ಸಹಿಯನ್ನೂ ಸಹ ಪೋರ್ಜರಿ ಮಾಡಿ ***1,27,600/-*** ರೂ.ಗಳನ್ನು ಬ್ಯಾಂಕಿನಿಂದ ಪಡೆದು ನನಗೂ ಹಾಗೂ ಬ್ಯಾಂಕಿಗೂ ಮೋಸ ಮಾಡಿರುತ್ತಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಈಗ ನನಗೆ ನೆನಪಿಲ್ಲ. ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-*21* ಎಂದು ಗುರುತಿಸಲಾಯ್ತು.

***ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ ಕೆ ಟಿ ವಕೀಲರಿಂದ.***

ಪೋಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಬಾವಿಕೆರೆಯಲ್ಲಿರುವ ಬ್ಯಾಂಕಿನ ಶಾಖೆಯಲ್ಲಿ ಆಭರಣಗಳನ್ನು ಒತ್ತೆ ಇಟ್ಟು ಸಾಲ ಪಡೆದ ವ್ಯವಹಾರವನ್ನು ಹೊರತುಪಡಿಸಿ ಬೇರೆ ವ್ಯವಹಾರ ನಾನು ಮಾಡಿಲ್ಲ ಎಂದರೆ ಸರಿ.

***ಮರುವಿಚಾರಣೆ: ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***